ಉತ್ತರಕ್ಕೆ.—ಕಾಡಲಿನಿಕುಪ್ಪನಿಂದ ಲೈನು ಪೂರ್ವದಿಕ್ಕಿಗಾಗಿಕೆಳಗೆ ನಮೂದಿರುವ ಮುಖ್ಯವಾದ ಸ್ಥಳಗಳ ಮೇಲೆ ಹಾಕಿಯಿರುತ್ತೆ.

1 ಕರಡೀಕಲ್ಲು ಪೆಟ್ಟದಕಣವೆ
2 ಮೂಲೇಶ್ವರನಗುಡಿ
3 ಗೋಪಾಲಸ್ವಾಮಿಗುಡಿಯ ಹಿಂದಣ ಮತ್ತೀಮರ
4 ಮಾದಗಿತ್ತಿದುರ್ಗ
5 " ಹೆಂಣುದಿಂಣೆಪೆಟ್ಟ
6 ಬೋಳಿಗುಡಿ
7 ಗುಂಡ್ಲು ಪ್ಯಾಟೆ ನೀಲಗಿರಿರೋಡ್ 1 ಫರ್ಲಾಂಗ್ ಕಲ್ಲಿನಬಳಿ ಯಿರುವಗುರ್ತು

ಸಿ. ಇ. ಎಂ. ರಸ್ಸೆಲ್,
ಫಾರೆಸ್ಟ್ಸ್ ಸೂಪರಿಂಟೆಂಡೆಂಟ್.

ಕಡೂರು ಡಿಸ್ಟ್ರಿಕ್ಟ್.

ತಾರೀಖು 14ನೇ ಮಾರ್ಚಿ 1889.

ಕಡೂರು ಡಿಸ್ಟ್ರಿಕ್ಟ್ ಮೂಡಿಗೆರೆ ತಾಲ್ಲೂಕು ಸಬ್ ರಜಿಸ್ಟ್ರಾರವರ ಆಫಿಸಿನಲ್ಲಿ ಈ ಕೆಳಗೆ ನಮೂದಿಸಿರುವ ಜೇವಾರಸ್ ದಸ್ತಾವೇಜುಗಳನ್ನು ಕ್ರಮ ಪ್ರಕಾರ ವಾರಸ್ದಾರರಾಗಲಿ ಅಥವಾ ಅಧಿಕಾರ ಹೊಂದಿದ ಮುತಾಲೀಕರಾಗಲಿ ಈ ತಾರೀಖು ಲಾಗಾಯತು ಒಂದು ತಿಂಗಳವಳಗಾಗಿ ವಾಪಸು ಪಡೆಯಬೇಕು, ತಪ್ಪಿದರೆ 1877ನೇ ಇಸವಿ IIIನೇ ನಂಬರ್ ಇಂಡಿಯನ್ ರಜಿಸ್ಟ್ರೇಷನ್ ಆಕ್ಟ್ 85ನೇ ಸೆಕ್ಷನ್ ಪ್ರಕಾರ ನಾಶಪಡಿಸಲ್ಪಡುತ್ತೆ

ದಸ್ತಾವೇಜಿನ ನಂಬರ್.	ದಸ್ತಾವೇಜನ್ನು ಬರದುಕೊಟ್ಟವರ ಹೆಸರು.	ದಸ್ತಾವೇಜನ್ನು ಬರಸಿ ಕೊಂಡವರ ಹೆಸರು.	ದಸ್ತಾವೇಜು ಹುಟ್ಟಿದ ತಾರೀಖು.	ದಸ್ತಾವೇಜು ರಜಿಸ್ಟ್ರೇಷನ್ ಆಗಬೇಕಾಗಿದ್ದ ತಾರೀಖು.	ದಸ್ತಾವೇಜು ರಜಿಸ್ಟ್ರೇಷನ್ ಮಾಡಿಕೊಟ್ಟ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
Iನೇ ಬುಕ್ಕು 83 1886—87	ಲಿಂಗೇಗೌಡ ಚಿಕ್ಕ ಮಗಳೂರು ತಾ॥ ಬಿದ್ರನಾಡು ಮಾಗಣಿ ಸಕ್ಕೆಹಳ್ಳಿ ವಾಸಸ್ತ	ಮಂಜಪ್ಪ ಹೆಬ್ಬಾ ಕುವ್ವೆ ಗ್ರಾಮ ನಾಗಂಮಚ್ಚಿ ತೋಟದ ವಾಸಸ್ತ ಮೂಡಿಗೆರೆ ತಾಲ್ಲೂಕು	6 3 87 8 3 87	7 3 87	7 3 87	ಬರದುಕೊಟ್ಟವನು ತನ್ನ ಬಾಬತು ಮೂಡಿಗೆರೆ ತಾಲ್ಲೂಕು ಮೇಲುಬಂಗಾಡಿ ಮಾಗಣಿ ಕುವ್ವೆ ಗ್ರಾಮದ ಸರ್ವೆ ನಂ. 22ನೇ ತರೀ ಜಮೀನ್ ಬರಸಿಕೊಂಡವರಿಗೆ 90 ರೂಪಾಯಿಗೆ ಕುದ್ಧಕ್ರಯಕ್ಕೆ ಕೊಟ್ಟಂತೆ ನಮೂದಾಗುವ ಕ್ರಯಪತ್ರ.
Iನೇ ಬುಕ್ಕು 85 1886—87	ರಾಮೇಗವ್ವಡ, ಮೂಡಿಗೆರೆತಾಲ್ಲೂಕು ಮೇಲ ಬಂಗಾಡಿ ಮಾಗಣಿ ಮೇಗೂರು ಗ್ರಾಮದ ವಾಸಸ್ತ	ಚನ್ನೇಗೌಡ ಮೂಡಿಗೆರೆ ತಾಲ್ಲೂಕು ಮೇಲುಬಂಗಾಡಿ ಮಾಗಣಿ ದುರ್ಗದ ಹಳ್ಳಿ ಗ್ರಾಮದವಾಸಸ್ತಾ	4 2 87	ಡಿಟೋ	ಡಿಟೋ	ಈ ದಸ್ತಾವೇಜು ಬರದುಕೊಟ್ಟವನು ತನ್ನ ಬಾಬತು ಮೇಗೂರು ಗ್ರಾಮದ ಸರ್ವೆ ನಂಬರ್ 1ನೇ ಕಾಫಿ ಸ್ಥಳವನ್ನು ಬರಸಿಕೊಂಡವರಿಗೆ ಸಲ್ಲಬೇಕಾದ ಲೇವಾದೇವಿ ಬಾಕಿ ರೂಪಾಯಿ 200ಕ್ಕೆ ಭೋಗ್ಯಕ್ಕೆ ಕೊಟ್ಟಂತೆ ನಮೂದಾಗುವ ಪತ್ರ.

ಜಿ. ಜೆ. ಮೈಕಲ್ಜಾರ್,
ರಜಿಸ್ಟ್ರಾರ್.

ಹಾಸನ ಡಿಸ್ಟ್ರಿಕ್ಟ್.

ತಾರೀಖು 12ನೇ ಫಿಬ್ರವರಿ 1889.

1. ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ,—ಹಾಸನ ಡಿಸ್ಟ್ರಿಕ್ಟ್ ಬೇಲೂರು ತಾಲ್ಲೂಕಿನ ಈ ಕೆಳಗೆ ನಮೂದಾಗಲ್ಪಡುವ ಜಮೀನ್ ಕಾಫೀ ಸಾಗುವಳಿಗೋಸ್ಕರ ಇದರ ಕೆಳಗಿನ ಸ್ಟೇಟ್‌ಮೆಂಟಿನ ಪ್ರಕಾರ ಕಾಲಂನಲ್ಲಿ ನಮೂದಾಗುವ ತಾರೀಖು ಮತ್ತು ಸ್ಥಳದಲ್ಲಿ ಬೇಲೂರು ತಾಲ್ಲೂಕು ಅಮಲ್ದಾರ್ರವರ ರೂಬರೂ ಹಾಸನ ಡಿಸ್ಟ್ರಿಕ್ಟ್ ಡಿಪ್ಯೂಟಿ ಕಮಿಷ್ನರ್ ಸಾಹೆಬರವರ ಮಂಜೂರಾತಿಗೆ ಪೈಳಪಟ್ಟು ಹರಾಜ್ ಮಾಡಿಸಲ್ಪಡುವದು.

2. ಈ ಹರಾಜು ಬಹಿರಂಗವಾಗಿ ದಸ್ತೂರ್ ಪ್ರಕಾರ ಮತ್ತು ಅನುಸರಿಸಿ ಗೊತ್ತಾಗಲ್ಪಟ್ಟ ಎಕರೆಗೆ 10 ರೂಪಾಯಿಗಳ ಮೇಲೆ ಜಡ ದರಖಾಸ್ತು ಮಾಡುವವರ ಹೆಸರಿಗೆ ಖ್ರಿದ್ ಮಾಡಲ್ಪಡುವದು. ದರಖಾಸ್ತುದಾರನಿಂದ ಹಾಜರ್ಮಾಡಲ್ಪಟ್ಟು ಗೊತ್ತಾಗಲ್ಪಟ್ಟ ಖರೀದಿಯ ನಾಲ್ಕರಲ್ಲಿ ಒಂದುಭಾಗದ ಡಿಪಾಜಿಟ್ ಹಣವು ದರಖಾಸ್ತುದಾರನ ಹೆಸರಿಗೆ ಹರಾಜು ನಿಂತಪಕ್ಷ ಆವನು ಈ ನೋಟೀಸ್ 4ನೇ ಕ್ಲಾಜ್ ಮೇರಿಗೆ ಕೊಡಬೇಕಾದ ಕೇಕಡಾ 25 ರೂಪಾಯಿ ಹರಾಜ್ ಹಣದ ಡಿಪಾಜಿಟ್ಟಿಗೆ ವಜಾ ಮಾಡಲ್ಪಡುವದು ಮತ್ತು ಇತರರು ಜಡ ದರಖಾಸ್ತು ಮಾಡಿ ಅವರಿಗೇನೇ ನಿಂತಪಕ್ಷ ದರಖಾಸ್ತುದಾರನ ಶೇವಣಿಯು ವಾಸಸ್ ಮಾಡಲ್ಪಡುವದು.

3. ಗೊತ್ತಾಗಲ್ಪಟ್ಟ ಖರೀದಿಯು ಸರ್ವೇ ಖರ್ಚನ್ನು ಅಡಗಿಸಿಕೊಂಡು ಯಿರುತ್ತಲ್ಲದೆ ಸಂದಲ್ ವಿನಹ ಪುಳಸಿಕೊಳ್ಳಲ್ಪಟ್ಟ ಜಾತಿ ಯಲ್ಲಮರಗಳ ಗವರ್ಮೆಂಟ್ ಹಕ್ಕನ್ನೂ ತೀರಿಸಿಕೊಂಡು ಯಿರುತ್ತೆ. ಸಂದಲ್ ಯೆವಾಗ್ಯೂ ಸರ್ಕಾರದ ಹಕ್ತಿನದೇ ಆಗಿ ಯಿರುತ್ತೆ.

4. ಚಹಡ ದರಖಾಸ್ತುದಾರನು ಹರ್ಷಾಜಿ ಬೈದಾದ ಪಹಿಸನೆಯೀ ಕೀಡಾ 25 ರೂಪಾಯಿಗಳ ಮೇರೆ ಕೊಡಪೇಕ್ಷಲ್ಲದೆ ಬಾಕೀ ಹಣವನ್ನ ಜಾರಿಯಲ್ಲಿರುವ ರೂಲ್ಸ್ ಅನುಸರ್ಚಿಸಿ ಪ್ರಹರ್ಷಜಿವರ್ತಾರ್ಕಿಖ್ಯಾಪಾಯಮ್ಮು ಸನ್ ತಾರೀಖಿನೆ ದಿವಸದ ಸೂರ್ಯಾಸ್ತಮಯದೊಳಗೆ ಕೊಡಲ್ಬೇಕು. ಹಾಗೆ ಕೊಡದೆ ತಪ್ಪಿದಲ್ಲಿ ಡಿಪಾಜಿಟ್ ಯಿಟ್ಟ ಪೊಬಲಗು ದಂಡವಾಗಿ ತೆಗದುಕೊಳ್ಳುವದಲ್ಲದೆ ಹರಾಜಿನೆಲ್ಲಿ ತೆಗದುಕೊಂಡವನ ಅವಗುಣಕ್ಕಾಗಿ ಪುನ್ಹ ಹರಾಜ್ ಮಾಡಿಸಲ್ಪಡುವದು 2ನೇ ಹರಾಜಿನಲ್ಲಿ ಕಮ್ಮೀ ಆಗುವ ಹಣವನ್ನು ಮೊದಲ್ ಹರಾಜ್ ದಾರನಿಂದ ವಸೂಲ್ ಮಾಡಲ್ಪಡುತ್ತೆ.

5. ಈ ರೂಲ್ಸ್ ಅನುಸರಿಸಿ ಹರಾಜ್ಕು ಮಾಡಲ್ಪಟ್ಟ ಜಮ್ಮಾನ್ನು ಮೂರುವರ್ಷ ಮುಖ್ತಾಗಿಯೂ ನಂತರ ಯಿರಡು ವರುಷ ಅರ್ಧ ಕಂದಾಯಕ್ಕೂ ಆರನೇ ವರುಷದಿಂದ್ಲೆ ಪೂರಾ ಕಂದಾಯಕ್ಕೂ ಕೊಡಲ್ಪಡುವದು. ಈ ರಿಯಾಯತಿಯನ್ನು ತೋರಿಸುವದಕ್ಕೆ ಮುಂಚೆ ಚಹಡ ದರಖಾಸ್ತುದಾರನು ಸದರೀ ಜಮ್ಮಾನಿನಲ್ಲಿ ಯಿರತಕ್ಕ ಸೊಗವಳೀ ಲಾಯಕ್ ಪ್ರದೇಶವನ್ನು ನಿಜವಾಗಿಯೂ ಗಿಡಹ್ಹಾಕುವದಕ್ಕೆ ದುತ್ನ ಪಡದೆ ಅಡವಿಯನ್ನು ತೆಗದು ಮರಗಳನ್ನು ಕಡಿದು ರಾಜೀನಾಮೆ ಕೊಟ್ಟದ್ದೇ ಆದರೆ ಮೊದಲ್ ವರುಷದ ಲಾಗಾಯತ್ತು ಪೂರಾ ಕಂದಾಯವನ್ನು ಸರಕಾರಕ್ಕೆ ಕೊಡಲು ಬದ್ಧನಾಗಿ ಮುಚ್ಚಳಿಕೆ ಬರೆದುಕೊಡಬೇಕು.

ಸರ್ವೆ ನಂಬರ್.	ದರಖಾಸ್ತುದಾರರ ಹೆಸರು.	ಹೆಸರುಮತ್ತು ಜಮೀನು ಯಿರುವ ಸ್ಥಳ.	ಹದ್ದುಬಸ್ತು.	ದರಖಾಸ್ತು ಮಾಡಿರುವ ಜಮೀನಿನ ವಿಸ್ತೀರ್ಣ ಎಕರೆಗಳು.	ಆಣಿ ಪಟ್ಟಿಯ ಪ್ರಕಾರ ಜಮೀನಿನ ಕಂದಾಯ.	ಷರಾ.
82	ಕೆಳಪಡಿಯೂರಿನ ಚಿಕ್ಕವೀರಯ್ಯನ ಮಗ ಬೆಂಗಳೂರು ಗ್ರಾಮದವನಿರುವ ಕಾಫೀ ಜಮೀನ್ದಾರ ಪುಟ್ಟಸ್ವಾಮಿಗೌಡರು.	ಅರಕಲ್ಗೋಡು ಹೋಬಳಿ ಬೆಂಗಳೂರು ಗ್ರಾಮದಲ್ಲಿರುವ ಕಾಫೀ ಜಮೀನು.	1 ಉತ್ತರಕ್ಕೆ ನಂಬರ್ 84 ಮೆ| ಪೊರ್ಟ್ಯಾರ್ ಸಾಹೆಬರ ಪೂಡಿ 1 ಪೂರ್ವಕ್ಕೆ ನಂಬರ್ 81ನೇ ಗೋವಾಳ 1 ದಕ್ಷಿಣಕ್ಕೆ ಜಿಮೋ ನಂಬರ್ 83ನೇ ಸರ್ಕಾರ್ ಪೈಸಿ 1 ಪಶ್ಚಿಮಕ್ಕೆ ಬೆಂಡರ್ ಪೈಸಿ	0 1 8	0 0 1 0 8 1 0 8 1	1889ನೇ ಇಸವಿ ಫೆಬ್ರವರಿ 25ನೇ ತಾರೀಖು 23ನೇ ತಾರೀಖಿನ ಸಾಯಂಕಾಲ 5 ಘಂಟೆ 11 ನಿಮಿಷಕ್ಕೆ ಲಾಗಾಯತು ಸಾಯಂಕಾಲ 5 ಘಂಟೆ ತನಕ್ಕ ಬೇಲ್ಲೂರಿನ ತಾಲ್ಲೂಕು ಕಚೇರಿಯಲ್ಲಿ ಅನುಭವದಲ್ಲಿರುವ ಹರಾಜ್ ಮಾಡಿಸಲ್ಪಟ್ಟ ಪ್ರಕಾರ ರೂಪಾಯಿ 100 ಕ್ಕೆ ಮುಂಗಡ ಹಣ ರೂ. 1

* ಯಕರೆ 5 ಗುಂಟೆ 36 ಬರಾಬ್ ಜಮೀನು ಅಡಗಿಕೊಂಡು ಯಿದೆ.

ಕಾಟೀಮು 25ನೇ ಫಿಬ್ರವರಿ 1889ನೇ ಇಸವಿ.

ಪಿ. ಎಸ್. ಪೂರ್ಣಯ್ಯ,
ಡೆಪ್ಯುಟಿ ಕಮ್ಮಿಷನರ್.

ಗವರ್ಮೆಂಟ್ ತಯಾರೀ ಬೂಬಿತು ಸಿಂಕೋನಾ ಫೆಬ್ರಿಸ್ಯೂಜ್ ಎಂಬ ಔಷಧ.

ಈ ಔಷಧವು, ಕ್ವಿನೈನ್‌ಗೆ ಬದಲಾಗಿ ಉಪಯೋಗಿಸತಕ್ಕ ಬಹಳ ಯೋಗ್ಯವಾದ ಔಷಧವಾಗಿರುತ್ತೆ. ಜನಗಳಿಗಾಗಿ ವ ಧರ್ಮಾರ್ಥವಾಗಿ ಗವರ್ಮೆಂಟ್ ಆಫೀಸರುಗಳು ಕೊಂಡು ಕೊಳ್ಳಬಹುದು, ಒಂದು ಸಲಕ್ಕೆ ಇಪ್ಪತ್ತು ಪೌಂಡುಗಳು ತೆಗದುಕೊಳ್ಳುವ ಯಾವ ಮನುಷ್ಯನಾದರೂ ಕಲ್ಕತ್ತೆಯಲ್ಲಿ ಬೊಟಾನಿಕಲ್ ಗಾರ್ಡನ್ ಸೂಪರ್‌ಟೆಂಡೆಂಟರ ದೆಶೆಯಿಂದ ಇದರಷ್ಟು ಕಂಡ ದರಗಳ ಪ್ರಕಾರ ನಗದು ಕೊಟ್ಟೇ ಕೊಂಡುಕೊಳ್ಳಬೇಕಾಗಿರುತ್ತೆ. ನಾಲ್ಕು ಔನ್ಸ್ ಔಷಧವುಳ್ಳ ತಗರದ ಡಬ್ಬೀ ಬಂದಕ್ಕೆ ರೂ. 4—8—0; ಎಂಟು ಔನ್ಸ್‌ವುಳ್ಳ ಡಬ್ಬಿಗೆ ರೂ. 8—8—0; ಬಂದು ಪೌಂ ಔಷಧವುಳ್ಳ ಡಬ್ಬಿಗೆ ರೂ. 16—8—0; ಬೊಟಾನಿಕಲ್ ಗಾರ್ಡನ್ ಸೂಪರ್‌ಟೆಂಡೆಂಟರು ಇದರಷ್ಟು ಕಂಡ ದರ ಪ್ರಕಾರ ನಗದಿಗೇನೇ ಸರ್ವಜನಗಳಿಗೂ ಒದಗಿಸ ಬಹುದು; ನಾಲ್ಕು ಔನ್ಸ್‌ವುಳ್ಳ ಡಬ್ಬಿಬಂದಕ್ಕೆ ರೂ. 5—8—0, ಎಂಟು ಔನ್ಸ್‌ವುಳ್ಳ ಡಬ್ಬಿಗೆ ರೂ. 10—8—0, ಬಂದು ಪೌಂವುಳ್ಳ ಡಬ್ಬಿಗೆ 20 ರೂಪಾಯಿ, ಈ ಔಷಧವು ಕಲ್ಕತ್ತೆಯಲ್ಲಿ ಮುಖ್ಯ ಮುಖ್ಯ ಯೂರೋಪಿಯನ್ ನೇಟೀವ್ ಮದ್ದಿನಂಗಡಿಯವರಿಂದ ಮಾರಲ್ಪಡುತ್ತೆ. ಸದರೀ ಕಿಮ್ಮತಿನೊಂದಿಗೆ ದರ 4 ವ 8 ಔನ್ಸ್ ತಗರದ ಡಬ್ಬಿಗೆ ಎಂಟು ಆಣೆ ಟಪ್ಪಾಲ್ ಹಾಸಲು, ಬಂದು ಪೌಂ ಡಬ್ಬಿಗೆ ಹನ್ನೆರಡು ಆಣೆ ಹಾಸಲೂ ಕೊಡಬೇಕು.